ಬೆಲ್ ಮಾಡಿ ಐದು ನಿಮಿಷಗಳಾದ ಮೇಲೆ ಬಾಗಿಲು ತೆರೆದಿತ್ತು. ಪಾಪ ಸ್ನಾನ ಮಾಡುತ್ತಿದ್ದವನು ಬೇಗ ಬೇಗನೆ ಮುಗಿಸಿ ಟವಲ್ ಸುತ್ತಿಕೊಂಡು ಬಂದಿದ್ದ. ಅಚ್ಚ ಬಿಳಿಯ ನೂಲಿನ ಸೀರೆಯಲ್ಲಿ ಅರಳಿ ನಿಂತಿದ್ದ ನನ್ನನ್ನು ನೋಡಿ ಗಲಿಬಿಲಿಗೊಂಡು, 'ಬನ್ನಿ ಕೂತ್ಕೊಳ್ಳಿ, ಒಂದು ನಿಮಿಷ ಬಂದೇ' ಎಂದು ಒಳಗೆ ಹಾರಿದ್ದ.

ಸುಂದರವಾಗಿ ಸಜ್ಜುಗೊಳಿಸಿದ್ದ ಮನೆ. ಏನೋ ಒಂದು ರೀತಿಯ ಶಾಂತ ಮೌನ ವಾತಾವರಣ. ಟಿವಿ ಮೇಲೆ ಸುಂದರವಾಗಿ ನಗುತ್ತಿದ್ದ ಹೆಣ್ಣಿನ ಒಂದು ಭಾವಚಿತ್ರ.

'ನನ್ನ ಹೆಂಡತಿ' ಅವನು ಬಂದಿದ್ದೇ ಗೊತ್ತಾಗಲಿಲ್ಲ. ಬೆಚ್ಚಿದೆ. 'ಓ...' ಅಂದೆ. ನನಗರಿವಿಲ್ಲದೆಯೇ ಕಣ್ಣು ಅಡಿಗೆ ಮನೆಯ ಕಡೆಗೆ ಹೊರಳಿರಬೇಕು.

'ಇಲ್ಲ, ಈಗಿಲ್ಲ, ಕ್ಯಾನ್ಸರ್ ಆಗಿತ್ತು' ಎಂದು ಹೇಳಿ ಅಡಿಗೆ ಮನೆಗೆ ಹೋಗಿ ಎರಡು ಲೋಟ ಟೀ ಮಾಡಿಕೊಂಡು ಬಂದ. ಒಂದು ನನಗೆ ಕೊಟ್ಟು ಇನ್ನೊಂದನ್ನು ಹೀರುತ್ತಾ ಕುರ್ಚಿಯಲ್ಲಿ ಕೂತು 'ತಾವು...?' ಎಂದು ಹುಬ್ಬೇರಿಸಿದ.

ಏನು ಹೇಳುವುದೋ ತಿಳಿಯದೆ ಗಲಿಬಿಲಿಗೊಂಡಿದ್ದ ನಾನು ಆಗ ನೆನಪಿಸಿಕೊಂಡೆ. ವಿಶೇಷ ಸಂಚಿಕೆಗೆ ಸಂಪಾದಕರು ಅವನ ಸಂದರ್ಶನ ಮಾಡಬೇಕೆಂದು ತಿಳಿಸಿದ್ದರು. ಮೊದಲೇ ನನ್ನ ನೆಚ್ಚಿನ ಲೇಖಕ. ಹೇಳಿದ ತಕ್ಷಣ ಒಪ್ಪಿ ಸಮಯ ಗೊತ್ತು ಮಾಡಲು ಬಂದಿದ್ದೆ.

ಗಹಗಹಿಸಿ ನಕ್ಕ. ಬಿದ್ದು ಬಿದ್ದು ನಕ್ಕ, ಕೊನೆಗೆ ನನ್ನ ಮುಖದಲ್ಲಿ ಕಂಡಿರಬಹುದಾದ ಗಲಿಬಿಲಿ ನೋಡಿ ಸಾವರಿಸಿಕೊಳ್ಳುತ್ತಾ 'ನನ್ನ ಸಂದರ್ಶನವೇ? ನನ್ನ ಕಥೇನಾ ಯಾರು ತಾನೇ ಓದ್ತಾರೆ ಅಂತಿದ್ದೆ. ಈಗ ನನ್ನ ಸಂದರ್ಶನವೇ?' ಮತ್ತಷ್ಟು ನಕ್ಕು ಕೊನೆಗೆ 'ಆಗ್ಲಿ ಬಿಡಿ. ಇದು ಒಂದು ಅನುಭವ' ಅಂದು 'ನಾಡಿದ್ದು ಮಧ್ಯಾಹ್ನ ಬರ್ತೀರಾ' ಎಂದ.

'ಹೂಂ' ಅಂದೆ.

ಎದ್ದು ಹೋಗಿ ಪುಟ್ಟ ಪುಸ್ತಕ ಪೆನ್ನು ತಂದು ಗುರುತು ಹಾಕಿ ಕೊಳ್ಳುತ್ತಾ 'ನಿಮ್ಮ ಹೆಸರು?' ಎಂದು ಕೇಳಿದ. ಹೇಳಿದೆ. ಮರುಕ್ಷಣ ಪೆನ್ನು ಮುಚ್ಚಿಟ್ಟು 'ಐಮಾಮ್ ಫ್ಲ್ಯಾಟರ್ಡ್' ಎಂದ. ಆಶ್ಚರ್ಯದಿಂದ. 'ಯಾಕೆ?' ಅಂದೆ.

'ನಾನು ನಿಮ್ಮ ಫ್ಯಾನ್' ಅಂದ. ಆಗ ನಗುವ ಸರದಿ ನನ್ನದಾಯಿತು.

'ಅವರು ತುಂಬಾ ರಿಸರ್ವ್ಡ್' ಹೆಸರು ಪಡೆದಿದ್ದ ನಾನು ಹತ್ತು ವರ್ಷ ದಿನಕರನ ಜೊತೆ ಸಂಸಾರ ಮಾಡಿ ಅವನ ನಿರ್ಲಿಪ್ತ ಸಂಕೋಚಗಳನ್ನು ಮೈಗೂಡಿಸಿಕೊಂಡು ಬಿಟ್ಟಿದ್ದೆ. ಹಿಂದೊಮ್ಮೆ ನಾನು ಪುಟಿಯುವ ಚಿಲುಮೆಯಾಗಿದ್ದೆ ಎಂದರೆ ಈಗ ನನಗೇ ನಂಬಿಕೆಯಾಗುತ್ತಿರಲಿಲ್ಲ. ಮೊದ ಮೊದಲು ದಿನಕರನಿಗೆ ನನ್ನ ಸ್ವಭಾವ ಅಂಟಿಸಬೇಕೆಂದು ಬಹಳ ಪ್ರಯತ್ನಪಟ್ಟಿದ್ದೆ. ಯಶಸ್ವಿಯಾಗಿರಲಿಲ್ಲ. ಕೊನೆಗೆ ಸೋಲೊಪ್ಪಿಕೊಂಡು ನಾನೂ ನನ್ನ ಚಿಪ್ಪೊಳಗೆ ಹುದುಗಿ ಹೋಗಿದ್ದೆ. ನಮ್ಮಿಬ್ಬರ ನಡುವೆ ದಿನದಲ್ಲಿ ಎರಡು ಮಾತು ವಿನಿಮಯವಾದರೆ ಹೆಚ್ಚಿತ್ತು. ಈ ಕಂದರ ತುಂಬುವ ಎಳೆ ಜೀವವಾದರೂ ಇದ್ದಿದ್ದರೆ ಬೇರೆ ಮಾತಾಗುತ್ತಿತ್ತು. ಒಂದೊಂದು ಸಲ ದಿನಕರ ಹೀಗೆ ಅಂತರ್ಮುಖಿಯಾಗುವುದಕ್ಕೆ ಇದೇ ಮೂಲ ಕಾರಣವೇನೋ ಎಂದು ಅನಿಸುತ್ತಿತ್ತು. ಅದೂ ಡಾಕ್ಟರು ನನ್ನಲ್ಲೇನೂ ದೋಷ ಇಲ್ಲ ಎಂದು ಹೇಳಿ ಸುಮ್ಮನಾಗಿ ಬಿಟ್ಟಾಗ ದಿನಕರ ಕಿಟಕಿಯಿಂದ ಆಚೆ ನೋಡುತ್ತಿದ್ದುದು ಒಂದು ರೀತಿಯ ಸಂಕಟ ಉಂಟಾಗಿತ್ತು. ಆದರೆ ಅದೆಂದೂ ನಮ್ಮ ನಡುವೆ ಅಡ್ಡ ಬಾರದಂತೆ ನಾನು ನೋಡಿಕೊಂಡಿದ್ದೆ. ಮನೆಯಲ್ಲೇ ಕೂತು ಬೇಸರವಾದಾಗ ಮತ್ತೆ ಕೆಲಸಕ್ಕೆ ಸೇರಿದೆ. ಹಳೆಯ ಬರಹಗಳ ಫೈಲು ನೋಡಿ ದಿನಪತ್ರಿಕೆಯ